ಮಗು ದಷ್ಟಪುಷ್ಟವಾಗಿರುವುದರಿಂದ ಸಹಜವಾಗಿ ನೋವು ಅಧಿಕವಾಗಿರಬೇಕೆಂದು ನಾನಾದರೂ ಭಾವಿಸಿದೆ. ಅವರು ಜೋರಾಗಿ ಬಲಪ್ರಯೋಗ ಮಾಡಿ ಮುಲುಕಿ ಹೊರದಬ್ಬಬೇಕೆಂದು ಸಲಹೆ ನೀಡುತ್ತಿದ್ದರು. ತಲೆ ಹೊರಬಂದರೆ ಸಾಕು, ಹಿಡಿದೆಳೆದು ಸಹಕರಿಸುತ್ತೇವೆಂದರು. ನನ್ನ ಕೊನೆಯ ಪ್ರಯತ್ನವೆಂಬಂತೆ ಮುಲುಕುತ್ತಿರುವಾಗ್ಗೆ ಅತೀವ ನೋವಿನಿಂದ ಇದ್ದಕ್ಕಿದ್ದಂತೆ ನಾನು ಪ್ರಜ್ಞೆ ತಪ್ಪಿಹೋದೆ...

## ಶುದ್ಧೋದನ

ಹೆರಿಗೆಗೆಂದು ತವರು ಮನೆಗೆ ಹೋದ ಮಾಯಾದೇವಿಯು ಇನ್ನೂ ದೇವದಹವನ್ನು ತಲುಪುವ ಮೊದಲೇ ಹೆರಿಗೆಯ ಬೇನೆಯಿಂದ ಬಳಲಲಾರಂಭಿಸಿದಳಂತೆ. ಪ್ರಯಾಣದ ಆಯಾಸ ಸಹಜವಾಗಿ ಆಕೆಯನ್ನು ಬಾಧಿಸಿರಬೇಕು. ಅವರ ಮನೆಯನ್ನು ತಲುಪುವ ಮೊದಲೇ ಸಿಕ್ಕ ಲುಂಬಿನಿಯ ಉದ್ಯಾನವನದಲ್ಲಿಯೇ ಬಿಡಾರವನ್ನು ಹೂಡಿ, ವ್ಯವಧಾನವಿರದಷ್ಟು ಬೇನೆ ಬಂದುದರಿಂದ, ಅಲ್ಲಿಯೇ ಹೆರಿಗೆಗೆ ಸಕಲ ಸಿದ್ಧತೆ ಮಾಡಿಸಿದರಂತೆ. ಸಕಲ ಸಿದ್ಧತೆ ಎಂದರೆ ಸೀರೆಯಿಂದ ಮರೆಮಾಡಿ, ಡೋಲಿಯಲ್ಲಿದ್ದ ಹಾಸನ್ನೇ ಹಾಸಿ, ಅಕ್ಕಪಕ್ಕದ ಹಳ್ಳಿಗಳಿಂದ ಸೂಲಗಿತ್ತಿಯರನ್ನು ಕರೆಸಿದ್ದು. ಪಳಗಿದ ಒಬ್ಬಳೇ ಸೂಲಗಿತ್ತಿಯನ್ನು ಕರೆಸಿದ್ದರೂ ಸಾಕಿತ್ತು. ಆದರೆ ಏರುರಾತ್ರಿಯಾಗುತ್ತಿದ್ದುದರಿಂದ ಗಾಬರಿಗೊಂಡು ಸುತ್ತಮುತ್ತಲಿದ್ದವರನ್ನೆಲ್ಲ ಕರೆಸಿಬಿಟ್ಟಿದ್ದಾರೆ. ಮಗಳ ಮೇಲಿನ ಅತೀವ ಪ್ರೀತಿ ಮತ್ತು ಕಾಳಜಿಯಿಂದ ಸುಲಕ್ಷಣಾದೇವಿಯೇ ಗಾಬರಿಯಿಂದ ನಡುಗುತ್ತಿದ್ದಾರೆಂದರೆ, ನಾಲ್ಕೈದು ಜನ ಆರೈಕೆಯವರನ್ನು ಕರೆಸಿದ್ದಾರೆಂದರೆ, ತನಗೆ ಆಗಬಾರದ್ದು ಏನೋ ಆಗಿದೆ ಎಂದು ಮಾಯಾದೇವಿ ಗಾಬರಿ ಬಿದ್ದಿದ್ದಾಳೆನಿಸುತ್ತದೆ. ಅಲ್ಲದೆ ನಮಗೆ ಮೊದಲ ಮಗುವೆಂದು ನಾನೂ, ನಮ್ಮ ಮನೆಯವರೂ ಅತೀವ ಆಸ್ಥೆ ವಹಿಸಿ ದಷ್ಟಪುಷ್ಟವಾಗಿರಲಿ ಎಂದು ಹೆಚ್ಚು ಪೌಷ್ಟಿಕ ಆಹಾರ ಕೊಟ್ಟು ಸಲಹಿದ್ದೇ ಮಾರಕವಾಗಿರಬೇಕು. ಮಗು ಹೆಚ್ಚು ದಪ್ಪವಾಗಿದ್ದುದರಿಂದ ಆಕೆಗೆ ಪ್ರಸವ ವೇದನೆಯೂ, ರಕ್ತಸ್ರಾವವೂ ಆಗಿ ಮಾಯಾ ಪ್ರಜ್ಞೆ ತಪ್ಪಿಹೋದಳಂತೆ!

ಮಗುವಿನ ತಲೆಯೂ ಈಚೆ ಬಂದಿಲ್ಲ, ಪ್ರಜ್ಞೆ ತಪ್ಪಿರುವ ಆಕೆ ಮುಲುಕುವಂತೆಯೂ ಇಲ್ಲ! ಹೀಗಾದರೆ ತಾಯಿ ಮತ್ತು ಮಕ್ಕಳಿಬ್ಬರ ಜೀವಕ್ಕೂ ಅಪಾಯ ಎಂದು ಹೆದರಿದ ಆ ಸೂಲಗಿತ್ತಿಯರು ಇವರ ಪೂರ್ವಾಪರ ವಿಚಾರಿಸಿದ್ದಾರೆ. ಆಕೆ ದೇವದಹದ ರಾಜಕುಮಾರಿ, ಕಪಿಲವಸ್ತುವಿನ ರಾಣಿ ಎಂದು ತಿಳಿದ ಮೇಲಂತೂ ಇನ್ನೂ ಭೀತಗೊಂಡಿದ್ದಾರೆ. ಸ್ವತಃ ರಾಜ ಅಂಜನಾಕೋಲಿಯ ಹಾಗೂ ರಾಣಿ ಸುಲಕ್ಷಣೆಯೇ ಅಲ್ಲಿರುವುದನ್ನು ಕಂಡ ಮೇಲಂತೂ ನಡುಗಲಾರಂಭಿಸಿದ್ದಾರೆ. ಆಕೆಗೇನಾದರೂ ಹೆಚ್ಚು ಕಮ್ಮಿಯಾದಲ್ಲಿ ತಮ್ಮ ಪ್ರಾಣಕ್ಕೇ ಸಂಚಕಾರ ಬರಬಹುದೆಂದು ತಳಮಳಿಸಲಾರಂಭಿಸಿದ್ದಾರೆ. ತಾಯಿ ಮಗುವನ್ನು ಉಳಿಸಬೇಕೆಂದರೆ ಕೈಹಾಕಿ ಮಗುವನ್ನು ಹೊರಗೆಳೆಯುವುದೊಂದೇ ದಾರಿ ಎಂದಾಗ ಬೇರೆ ದಾರಿಗಾಣದ ಸುಲಕ್ಷಣೆ, ಒಪ್ಪಿಗೆ ಕೊಟ್ಟುಬಿಟ್ಟಿದ್ದಾರೆ. ಇಬ್ಬರೋ ಮೂವರೋ ಸೇರಿ ಆ ಚಂದ್ರನ ಬೆಳಕು ಮತ್ತು ದೊಂದಿ ಬೆಳಕಿನಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಅವರಲ್ಲೇ ವಯಸ್ಸಾದ ಒಬ್ಬಾಕೆ ಎರಡೂ ಕೈಗಳನ್ನು ಒಳತೂರಿಸಿ, ಮಗುವಿನ ತಲೆಯನ್ನು ಬೆರಳುಗಳ ಹಿಡಿತಕ್ಕೆ ಸಿಕ್ಕಿಸಿಕೊಂಡು ಏಕದಂ ಹೊರಕ್ಕೆಳೆದಾಗ ಪ್ರಜ್ಞೆ ತಪ್ಪಿದ್ದ ಗಟ್ಟಿಗಿತ್ತಿ ಮಾಯೆಯಂಥ ಮಾಯೆಯೇ ವೇದನೆಯಿಂದ ಒಂದು ಕ್ಷಣ ಕಿರುಚಿಬಿಟ್ಟಳಂತೆ... ತಮ್ಮ ಅನುಭವದ ಪಾಠದಂತೆ ಹುಟ್ಟಿದ ಮಗು ಅಳದೇ ಇರುವುದು ಹಾಗೂ ತನ್ನ ಮಗಳಿಗೆ ಇನ್ನೂ ಪ್ರಜ್ಞೆ ಮರಳದಿರುವುದು ಸುಲಕ್ಷಣೆಯ ಆತಂಕಕ್ಕೆ ಕಾರಣವಾಗಿತ್ತು. ಆದರೆ ಸುರಕ್ಷಿತವಾಗಿ ಹೊರಬಂದ ಮಗು ಪೂರ್ವದಲ್ಲಿರುವ ತುಂಬು ಹುಣ್ಣಿಮೆ ಚಂದ್ರನಂತೆ ಪ್ರಸನ್ನವದನನಾಗಿರುವುದು ದೊರೆ ಅಂಜನಪ್ರಭುವಿನ ಖುಷಿಗೆ ಕಾರಣವಾಗಿತ್ತು. ಕರುಳಬಳ್ಳಿಯನ್ನು ಕತ್ತರಿಸಲು ಚಾಕುವನ್ನು ಕೊಡಿರೆಂದಾಗಲೇ ಅದಿಲ್ಲದುದರ ಅರಿವಾದದ್ದು. ದಿಢೀರ್ ಆದ ಬೆಳವಣಿಗೆಯಿಂದಾಗಿ ಅಂಥವನ್ನೆಲ್ಲ ಈ ಕಾಡಿನಲ್ಲಿ ಎಲ್ಲಿ ಹೊಂದಿಸಿಡಲು ಸಾಧ್ಯ ಎಂದುಕೊಂಡು, ಆತ್ಮರಕ್ಷಣೆಗಾಗಿ ತಮ್ಮ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕತ್ತಿಯನ್ನೇ ಎಳೆದುಕೊಟ್ಟರಂತೆ...

ರಾತ್ರಿಯೇ ಅಲ್ಲಿಂದ ಹೊರಟ ಬಂಟನೊಬ್ಬ ಸುದ್ದಿಯನ್ನು ಮುಟ್ಟಿಸುವ ವೇಳೆಗೆ ಬೆಳಕಾಗಿತ್ತು. ಬೆಳಗಿನ ಉಪಾಕರ್ಮಗಳನ್ನು ಮಾಡದೇ ನಾನು ನನ್ನ ಬಲಾಢ್ಯ ಕುದುರೆ ಗರುಡನ ಬೆನ್ನೇರಿ ದೌಡಾಯಿಸಿದೆ. ಮಾಯಾಳಿಗೆ ಪ್ರಜ್ಞೆ ಮರಳದೇ ಇರುವುದರಿಂದ ಹಾಗೂ ನಾನು ಬರುತ್ತಿರುವ ಸೂಚನೆ ಇದ್ದುದರಿಂದ ಅವರು ಬಿಡಾರವನ್ನು ಇನ್ನೂ ಕದಲಿಸಿರಲಿಲ್ಲ. 'ಮಾಯಾ, ನಾನು ಬಂದಿರುವೆ ನೋಡು, ಕಣ್ಣುಬಿಡು...' ಎಂದು ಆಕೆಯ ಕೆನ್ನೆಯನ್ನು ಹಿಡಿದು ಅಲುಗಾಡಿಸಿದೆ. ಆಕೆ ಸರಾಗವಾಗಿ ಉಸಿರಾಡುತ್ತಿದ್ದುದರಿಂದ ಧೈರ್ಯ ಮೂಡಿತು. ಮಗುವಿನ ಕಡೆ ದೃಷ್ಟಿ ಹಾಯಿಸಿದೆ. ತಿಳಿನಿದ್ದೆಯಲ್ಲಿದ್ದ ಆ ಮಗು, ನಿದ್ದೆಯಲ್ಲೇನು ಸ್ವರ್ಗದ ಕನಸು ಕಾಣುತ್ತಿರುವಂತೆ ಮಂದಸ್ಮಿತ ನಗು ಬೀರಿತು – ನನ್ನನ್ನು ಕಂಡೇ ಮುಗುಳ್ನಕ್ಕಂತೆ. ಅದಕ್ಕೆ, ತನಗೆ ಜನ್ಮ ನೀಡಲು ತನ್ನ ತಾಯಿ ತನ್ನ ಪ್ರಾಣವನ್ನೇ ಒತ್ತೆ ಇಟ್ಟಿದ್ದಾಳೆಂಬ ಯಾವ ಅರಿವೂ ಇರಲಿಲ್ಲ. ನನ್ನ ಮನಸ್ಸನ್ನು ಅರಿತವಳಂತೆ ಸುಲಕ್ಷಣೆ ಬಟ್ಟೆಯಲ್ಲಿ ಸುತ್ತಿದ್ದ ಮಾಂಸದ ಮುದ್ದೆಯಂಥ ಮಗುವನ್ನು ನನ್ನ ಕೈಯಲ್ಲಿಟ್ಟಳು. ಆ ಸಂಭ್ರಮ ಒಂದು ಕಡೆಯಾದರೆ, ಪ್ರಜ್ಞೆ ತಿಳಿದೇಳದ ಮಾಯೆಯ ಚಿಂತೆ ಇನ್ನೊಂದು ಕಡೆ.

ದೊರೆ ಅಂಜನ ಕೋಲಿಯ ಮತ್ತು ಸುಲಕ್ಷಣೆಯರು ದೇವದಹಕ್ಕೆ ಕರೆದೊಯ್ಯಲು ಉಪಕ್ರಮಿಸಿದರೆ, ನಾನು ಕಪಿಲವಸ್ತುವಿಗೇ ಹೊರಡೋಣವೆಂದು ಅವಸರಿಸಿದೆ. ಹೆರಿಗೆಗೆಂದು ಮಾಯೆ ಹೇಗೆ ಹೊರಟಿದ್ದಳೋ ಹಾಗೇ ಮೇನೆಯಲ್ಲೇ ಮಲಗಿಸಿಕೊಂಡು ಹಿಂದಿರುಗಿದರು. ಮಗುವು ಮಾತ್ರ ತನ್ನ ಅಜ್ಜಿ ಸುಲಕ್ಷಣೆಯ ಮಡಿಲಲ್ಲಿ ನಗುತ್ತ ಮಲಗಿತ್ತು. ತಾಯಿಯನ್ನು ಹಂಬಲಿಸಬಹುದಾದ ಅದನ್ನು ರಮಿಸಲು ಜೊತೆಗೆ ಪ್ರಜಾಪತಿದೇವಿಯೂ ಇದ್ದಳಲ್ಲ. ಅವರೆಲ್ಲ ರಥದಲ್ಲಿ ಬರುತ್ತಿದ್ದರೆ, ನಾನು ನನ್ನ ಕುದುರೆಯ ಮುಂದೆ ಮಾಯೆಯ ಡೋಲಿಯನ್ನೂ, ಹಿಂದೆ ಮಗನ ರಥವನ್ನೂ ಬಿಟ್ಟುಕೊಂಡು ಮಧ್ಯೆ ನಿಧಾನಕ್ಕೆ ಸಂಚರಿಸುತ್ತಿದ್ದೆ. ಇಬ್ಬರ ಪ್ರತಿಯೊಂದು ಬೆಳವಣಿಗೆಯೂ ನನಗೆ ತಕ್ಷಣ ತಿಳಿಯಬೇಕೆಂಬ ತವಕ ನನಗೆ. ರಾಣಿ ಮಾಯಾ ಹೀಗೇ ಅಪ್ರಜ್ಞಳಾಗಿ ಮಲಗಿದ್ದರೆ ಅರಮನೆಯೊಳಕ್ಕೆ ಅನಾಮತ್ತಾಗಿ ಎತ್ತಿಕೊಂಡು ಹೋಗಬೇಕಾಗುತ್ತದೆ. ಆಗ ನಮ್ಮನ್ನು ಗಮನಿಸುವ ಊರ ಜನ ಏನೋ ಅನಾಹುತವಾಗಿದೆಯೆಂದು ಗ್ರಹಿಸಿ, ಯೋಗಕ್ಷೇಮ ವಿಚಾರಿಸಲು ಮನೆಗೆ ಬರುವುದು, ಅವರಿಗೆ ಹೇಳಿದ್ದೇ ಉತ್ತರಗಳನ್ನು ಹೇಳೀ ಹೇಳಿ ಕಳಿಸುವುದು ಯಾಕೋ ರೇಜಿಗೆಯಾಗಬಹುದೆನಿಸಿತು. ಆದಾಗ್ಯೂ ನಾವು ಲುಂಬಿನಿಯಿಂದ ಹೊರಟಾಗಲೇ ಅಪರಾಹ್ನ ಸಮೀಪಿಸಿದ್ದರಿಂದ ಮನೆ ಸೇರುವ ವೇಳೆಗೆ ಮಧ್ಯರಾತ್ರಿ ದಾಟುವುದರಿಂದ, ಊರವರೆಲ್ಲರೂ ಮಲಗಿರುವುದರಿಂದ ಅಂಥದೇನೂ ಆಗುವುದಿಲ್ಲವೆಂಬ ಸಮಾಧಾನವನ್ನು ನನಗೆ ನಾನೇ ತಂದುಕೊಂಡು ಚಲಿಸುತ್ತಿದ್ದೆ. ಆದರೆ ಸೂರ್ಯಾಸ್ತದ ವೇಳೆಗೇ ಮಾಯಾಳಿಗೆ ಪ್ರಜ್ಞೆ ಬಂದಿತು. ಆಕೆ ಎಚ್ಚರಾವಸ್ಥೆಗೆ ಮರಳುವಾಗ ನರಳುವುದು ನನಗೆ ಕೇಳಿಸಿ ಡೋಲಿಯನ್ನು ನಿಲ್ಲಿಸಲು ಹೇಳಿ, ಕುದುರೆಯಿಂದಿಳಿದು ಹೋಗಿ ಆಕೆಯನ್ನು ರಮಿಸಿದೆ. ಹಿಂದೆಯೇ ರಥವನ್ನು ನಿಲ್ಲಿಸಿ ಅತ್ತೆ–ಮಾವಂದಿರೂ ಇಳಿದುಬಂದಿದ್ದರು.

ಮಾಯಾ ಮೆಲ್ಲಗೆ ಕಣ್ಣುಬಿಟ್ಟಳು. ಅವಳ ಮುಖದ ಮೇಲೆ ತಣ್ಣನೆ ನೀರಿನ ಸಿಂಚನ ಮಾಡಿ, ಮಂಪರನ್ನು ಪೂರಾ ಕರಗಿಸಿದೆ. ಆಗ ಆಕೆಯ ಮುಖದಲ್ಲಿ ಕಂಡ ಲವಲವಿಕೆಯಿಂದ ನಾನು ಉಲ್ಲಸಿತಗೊಂಡೆ. 'ಮಗೂ... ನನ್ನ ಮಗೂ...?' ಎಂದಳು. ಮಗುವಿಗೇನಾದರೂ ಅಪಾಯವೊದಗಿರಬಹುದೇ ಎಂಬ ದುಗುಡದಲ್ಲಿ. ಅಷ್ಟರಲ್ಲಿ ಪ್ರಜಾಪತಿದೇವಿಯೂ ಮಗುವನ್ನು ಎತ್ತಿಕೊಂಡು ಬಂದು ಮಾಯೆಯ ಮಡಿಲಲ್ಲಿರಿಸಿದಳು. ಆಗ ಮಾಯಾಳ ಮುಖದಲ್ಲಿ ಕಂಡ ಸಾರ್ಥಕ್ಯ ಭಾವವನ್ನು ವರ್ಣಿಸಲಸದಳ. ಅದರ ಮುಖವನ್ನೊಮ್ಮೆ ಚುಂಬಿಸಿ, ಅದರ ಮರ್ಮಾಂಗದ ಮೇಲಿನ ಬಟ್ಟೆಯನ್ನೊಮ್ಮೆ ಸರಿಸಿ ನೋಡಿ, ಗಂಡೆಂದು ಖಾತ್ರಿಯಾದ ಮೇಲೆ ಮತ್ತಷ್ಟು ಉಲ್ಲಸಿತಳಾಗಿ ಮತ್ತೊಮ್ಮೆ ಚುಂಬಿಸಿ, ಸೆರಗನ್ನು ಮರೆಮಾಡಿ ಮಗುವಿನ ಬಾಯಿಗೆ ಮೊಲೆಯೂಡಿಸಿದ ಮೇಲೇ ಹೊರಪ್ರಪಂಚದ ಅರಿವಾದವಳಂತೆ ಸುತ್ತಮುತ್ತ ನೋಡಿ ನಾವೆಲ್ಲ ಇರುವುದನ್ನು ಕಂಡು, ಈವರೆಗಿನ ಪ್ರತಿಕ್ರಿಯೆಗೆ ತಾನೇ ನಾಚಿಕೊಂಡವಳಂತೆ ಮುಖ ಕೆಳಗು ಮಾಡಿದಳು. ಎಲ್ಲರ ಮುಖದಲ್ಲೂ ಕಂಟಕವೊಂದು ಕಳೆದು ಹೋಯಿತಲ್ಲ ಎಂಬ ಸಂತಸ ಇಣುಕು ಹಾಕುತ್ತಿತ್ತು.

(ಸಶೇಷ)